ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1099(1516)**

ಸದಸ್ಯರ ಹೆಸರು ಶ್ರೀ ಧ್ರುವನಾರಾಯಣ ಆರ್(ಸಂತೇಮರಳ್ಳಿ)

ಉತ್ತರಿಸುವ ಸಚಿವರು ಶ್ರೀ ಎನ್ ಚಲುವರಾಯಸ್ವಾಮಿ(ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ಒಟ್ಟು ಎಷ್ಟು ವಾಣಿಜ್ಯ ಮಳಿಗೆಗಳಿವೆ (ವಿಭಾಗೀಯವಾರು ವಿವರ ನೀಡುವುದು),

ಒಟ್ಟು 2387 ವಾಣಿಜ್ಯ ಮಳಿಗೆಗಳಿರುತ್ತವೆ (ವಿಭಾಗೀಯ ಮಾಹಿತಿಯನ್ನು ಅನುಬಂಧ 'ಎ'ನಲ್ಲಿ ನೀಡಲಾಗಿದೆ)

ಆ) ಸದರಿ ವಾಣಿಜ್ಯ ಮಳಿಗೆಗಳಿಗೆ ಪರವಾನಗಿಯನ್ನು ಯಾವ ಆಧಾರದ ಮೇಲೆ ಎಷ್ಟು ವರ್ಷಗಳ ಅವಧಿಗೆ ನೀಡಲಾಗುತ್ತಿದೆ,

ಸದರಿ ವಾಣಿಜ್ಯ ಮಳಿಗೆಗಳಿಗೆ, ಸಂಸ್ಥೆಯ ಸ್ಥಾಯಿ ಆದೇಶ ಸಂಖ್ಯೆ 492, ದಿನಾಂಕ 23 04 2001 ಹಾಗೂ ಸಾ ಸ್ಥಾ ಆ ಸಂಖ್ಯೆ 584, ದಿ 05 11 06ಗಳ ನಿರ್ದೇಶನಗಳಂತೆ ಟೆಂಡರು/ಹರಾಜು ಮೂಲಕ ಆಯ್ಕೆ ಮಾಡಿ ಪರವಾನಗಿಯನ್ನು ನೀಡಲಾಗುತ್ತಿದೆ ಖಾಲಿ ಸ್ಥಳದಲ್ಲಿನ ವಾಣಿಜ್ಯ ಮಳಿಗೆಗಳಿಗೆ ಮೂರು ವರ್ಷ ಹಾಗೂ ಶಾಶ್ವತ ಕಟ್ಟಡಗಳಲ್ಲಿನ ಮಳಿಗೆಗಳಿಗೆ ಐದು ವರ್ಷ ಗಳಿಗೆ ಅನುಮತಿ ನೀಡಲಾಗುತ್ತಿದೆ

ಇ) ಸದರಿ ವಾಣಿಜ್ಯ ಮಳಿಗೆಗಳನ್ನು ಎಷ್ಟು ಮಂದಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಪರವಾನಗೆದಾರರನ್ನಾಗಿ ಆಯ್ಕೆ ಮಾಡಲಾಗಿದೆ,

ಪರವಾನಗಿದಾರರನ್ನು ಹರಾಜು–ಕಂ–ಟೆಂಡರ್ ಮುಖಾಂತರ ಆಯ್ಕೆ ಮಾಡಿ ಹಂಚಿಕೆ ಮಾಡುವುದರಿಂದ ಯಾರು ಬೇಕಾದರೂ ಹರಾಜು–ಕಂ–ಟೆಂಡರಿನಲ್ಲಿ ಭಾಗವಹಿಸಿ ಮಳಿಗೆಗಳನ್ನು ಪಡೆಯಬಹುದಾಗಿರುತ್ತದೆ ಆದಕಾರಣ ಆಯ್ಕೆಯಾದವರಲ್ಲಿ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದವರ ಮಾಹಿತಿ ಲಭ್ಯವಿಲ್ಲ

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ವಾಣಿಜ್ಯ ಮಳಿಗೆಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಮೀಸಲಿಡುವ ಕಾನೂನು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉದ್ಭವಿಸುವುದಿಲ್ಲ

ಉ) ಬಂದಿದ್ದ ಪಕ್ಷದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಉದ್ಭವಿಸುವುದಿಲ್ಲ